ಕಥೆ

# ಅಪ್ಪಂದಿರ ದಿನಾಚರಣೆ



**ಮೀನಾ ಮೈಸೂರು**

ಕಲೆ: ರೂಪಶ್ರೀ ಕಲ್ಲಿಗನೂರು

ಟಿವಿಯಲ್ಲಿ ಅಪ್ಪಂದಿರ ದಿನಾಚರಣೆ ಬಗ್ಗೆ ಕಾರ್ಯಕ್ರಮ ಪ್ರಸಾರವಾಗುತ್ತಿತ್ತು. ನಡುನಡುವೆ ಕುಡಿತದ ದುಷ್ಪರಿಣಾಮಗಳ ಬಗ್ಗೆ ಜಾಹೀರಾತು. ಜೊತೆಗೆ, 'ಅಪ್ಪಾ, ಐ ಲವ್ ಯೂ ಅಪ್ಪಾ' ಅಂತ ಸುಮಧುರವಾಗಿ ಹಾಡುತ್ತಿದ್ದ ದನಿಯೂ ಕೇಳಿಬರುತ್ತಿತ್ತು. ನಿನ್ನಂಥ ಅಪ್ಪ ಇಲ್ಲ, ಅಪ್ಪಂಗೆ ಯಾರೂ ಸಮವಿಲ್ಲ, ಯಾರೋ ಪುಣ್ಯಾತ್ಮರು ನಮ್ಮಪ್ಪ ಹಾಗೆ, ನಮ್ಮಪ್ಪ ಹೀಗೆ ಅಂತ ಪಾಪ ಕೊಚ್ಚಿಕೊಳ್ಳುತ್ತಲೇ ಇದ್ದರು. ನನ್ನಪ್ಪ ಅದು ತೋರಿಸಿದ, ಇದು ತೋರಿಸಿದ, ಕೈಲಾಸವನ್ನೇ ಕಾಣಿಸಿದ ಅಂತೆಲ್ಲಾ ಯಾರ್‍ಯಾರೋ ಮಾತನಾಡುತ್ತಾ ಹೊಗಳುತ್ತಾ ಭಾವಪರವಶರಾಗಿ ಹಾಡುತ್ತಿದ್ದರು. ಆದರೆ ನನಗೋ ಅಪ್ಪ ಎಂದ ಕೂಡಲೇ ನನ್ನ ರಕ್ತ ಕುದಿಯುತ್ತಿತ್ತು. ಟಿ.ವಿಯಲ್ಲಿ ಹಾಡಿ ಹೊಗಳುತ್ತಿದ್ದಾರಲ್ಲ ಅವರಂತಹ ಸೌಭಾಗ್ಯ ನನ್ನದಾಗಿರದ ಕಾರಣ 'ಅಪ್ಪ' ಎಂಬ ಪದವೇ ನನ್ನ ಬದುಕಿನ ವ್ಯಂಗ್ಯ ಅನ್ನಿಸುತ್ತಿತ್ತು. ಅಪ್ಪಂದಿರು ಮಕ್ಕಳನ್ನು ಹೆಗಲ ಮೇಲೆ ಎತ್ತಿ ಕುಣಿಸುವ ಚಿತ್ರ ಕಿರು ಪರದೆಯ ಮೇಲೆ ಮೂಡಿ ಬರುತ್ತಿದ್ದರೆ, ನನ್ನ ಮನಸ್ಸು ಮುದುಡಿ 35 ವರ್ಷಗಳ ಆಚೆಗೆ ಜಿಗಿಯಿತು.

ಅಪ್ಪಂದಿರ ದಿನಾಚರಣೆ, ಅಮ್ಮಂದಿರ ದಿನಾಚರಣೆ, ಪ್ರೇಮಿಗಳ ದಿನಾಚರಣೆ ಹೀಗೆ ದಿನಕ್ಕೊಂದು ದಿನಾಚರಣೆಗಳು. ನಾವು ಚಿಕ್ಕವರಿದ್ದಾಗ ಇಂತಹ ಯಾವ ದಿನಾಚರಣೆಯನ್ನೂ ಕೇಳಿರಲಿಲ್ಲ. ಈಗ ಪ್ರತಿದಿನವೂ ಒಂದಲ್ಲ ಒಂದು ದಿನಾಚರಣೆ ಇದ್ದೇ ಇರುತ್ತದೆ. ನನ್ನಂಥವನಿಗೆ ಯಾವ ದಿನಾಚರಣೆ?. ನಿತ್ಯವೂ ಹಸಿವಿನ ಹಬ್ಬ, ಕಿತ್ತು ತಿನ್ನುವ ಬಡತನದ ಹಬ್ಬ. ಒಂದು ದಿನ ಒಂದು ಹೊತ್ತು ಹೊಟ್ಟೆ ತುಂಬಾ ಉಂಡಿದ್ದೇ ಗೊತ್ತಿಲ್ಲದ, ಅರೆಹೊಟ್ಟೆ ತುಂಬಿದ, ಅರೆ ಹೊಟ್ಟೆ ಖಾಲಿ ಇದ್ದ ಹಬ್ಬ, ನನ್ನ ಅಪ್ಪ ನನ್ನ ಹುಟ್ಟಿಸಿದ ಎಂಬ ಕಾರಣಕ್ಕೆ ಮಾತ್ರ ಅವನನ್ನು ಅಪ್ಪ ಎನ್ನಬೇಕು ಅಷ್ಟೇ. ಅವನಿಗೆ ತಾನು, ತನ್ನ ಕುಡಿತ ಬಿಟ್ಟರೆ ಬೇರೆ ಪ್ರಪಂಚವೇ ಗೊತ್ತಿರಲಿಲ್ಲ. ಪ್ರತೀ ರಾತ್ರಿ ಕುಡಿದ ಅಮಲಿನಲ್ಲಿ ಅಮ್ಮನನ್ನು ಚಚ್ಚುವುದು, ನಮ್ಮ ಗ್ರಹಚಾರ ಕೆಟ್ಟಿದ್ದರೆ ಮಲಗಿದ್ದ ನಮ್ಮನ್ನು ಕಾಲಿನಿಂದ ಒದೆಯುವುದು ಬಿಟ್ಟರೆ, ಅವನಿಗೆ ಬೇರೇನೂ ಮಾಡಲು ಗೊತ್ತಿರಲಿಲ್ಲ. ಒಂದೇ ಒಂದು ದಿನ ಅಪ್ಪನೊಂದಿಗೆ ನಾನು ಮಾತನಾಡಿ ಗೊತ್ತಿಲ್ಲ, ನಮಗೆಂದೂ ಅವ ಒಂದು ದಿನ ಬಿಸ್ಕತ್ತು ತಂದು ಕೊಟ್ಟಿದ್ದೂ ಕಾಣೆ. ಬಾಲ್ಯದ ಆಟ, ಪಾಠ, ಹುಡುಗಾಟ ಯಾವುದೂ ಗೊತ್ತಾಗದಂತೆ ಬಾಲ್ಯವೆಂಬುದು ಕಳೆದೇ ಹೋಯಿತು.